# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ | KANNADA POST | ಇದು ಸುದ್ದಿ ವಿಳಾಸ | ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 198 | Pages. 2 | Date: 17-07-2026, FRIDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 198 - ಪುಟಗಳು : 2 | 17-07-2026 ಶುಕ್ರವಾರ | Ph: 8762954248 | ದರ : ₹1


# ರಣಘಟ್ಟ ಯೋಜನೆ ಪೂರ್ಣಗೊಳಿಸುವ ಸಂಕಲ್ಪ

## ಶಾಸಕ ಹೆಚ್.ಕೆ.ಸುರೇಶ್ ಹೇಳಿಕೆ । ದ್ವಾರ ಸಮುದ್ರ ಕೆರೆಗೆ ಬಾಗಿನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಳೇಬೀಡು: ಬೇಲೂರು ಕ್ಷೇತ್ರದ ಕೃಷಿ ಭೂಮಿಗೆ ಅತ್ಯವಶ್ಯಕವಾಗಿರುವ ರಣಘಟ್ಟ ಯೋಜನೆಯನ್ನು ಪೂರ್ಣಗೊಳಿಸಲಾಗುವುದು ಎಂದು ಶಾಸಕ ಹೆಚ್.ಕೆ. ಸುರೇಶ್ ಹೇಳಿದರು.

ಇಲ್ಲಿನ ದ್ವಾರ ಸಮುದ್ರ ಕೆರೆಗೆ ಗುರುವಾರ ಬಾಗಿನ ಅರ್ಪಿಸಿ ಮಾತನಾಡಿದ ಅವರು, ಹೊಯ್ಸಳೇಶ್ವರ ಹಾಗೂ ಮಲ್ಲಿಕಾರ್ಜುನ ಸ್ವಾಮಿ ಕೃಪೆಯಿಂದ ಕೆರೆ ಭರ್ತಿಯಾಗಿದೆ. ಹಳೇಬೀಡು ಕೆರೆ ತುಂಬಿರುವುದು ಕ್ಷೇತ್ರದ ಜನರಿಗೆ ಹೆಮ್ಮೆಯ ವಿಷಯ. 2017ರಲ್ಲಿ ಪುಷ್ಪಗಿರಿ ಮಠದ ಶ್ರೀ ಸೋಮಶೇಖರ ಸ್ವಾಮೀಜಿ ನೇತೃತ್ವದಲ್ಲಿ ನಡೆದ ಹೋರಾಟದ ಫಲವಾಗಿ ಈ ಭಾಗದ ಜಲಮೂಲಗಳು ಸಮೃದ್ಧಿಯಾಗಿವೆ ಎಂದರು.

ಶಾಸಕನಾದ ಬಳಿಕ ರಣಘಟ್ಟ, ಎತ್ತಿನಹೊಳೆ ಹಾಗೂ ಆಲದಹಳ್ಳಿ ಏತ ನೀರಾವರಿ ಯೋಜನೆ ಕಾಮಗಾರಿಗೆ ವೇಗ ನೀಡಲಾಗಿದೆ. ಸದ್ಯ ದೊರೆತಿರುವ ನೀರು ತಾತ್ಕಾಲಿಕ ಅಗತ್ಯ ಪೂರೈಸಿದರೂ, ಕ್ಷೇತ್ರಕ್ಕೆ ಶಾಶ್ವತ ನೀರಿನ ಭದ್ರತೆ ಕಲ್ಪಿಸಲು ರಣಘಟ್ಟ ಯೋಜನೆಯನ್ನು ಶೀಘ್ರ ಪೂರ್ಣಗೊಳಿಸಲಾಗುವುದು. ಈ ನಿಟ್ಟಿನಲ್ಲಿ ಎಲ್ಲಾ ಪ್ರಯತ್ನ ನಡೆದಿದೆ ಎಂದರು.



ಮುಂದಿನ ದಿನಗಳಲ್ಲಿ ಸಂಬಂಧಪಟ್ಟ ಸಚಿವರನ್ನು ಆಹ್ವಾನಿಸಿ ವಿಧಿವತ್ತಾಗಿ ಬಾಗಿನ ಅರ್ಪಿಸಲಾಗುವುದು. ಉಳಿದ ಅವಧಿಯಲ್ಲಿ ಕ್ಷೇತ್ರದ ಬಾಕಿ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸರ್ಕಾರದ ಮೇಲೆ ಒತ್ತಡ ಹೇರಲಾಗುವುದು ಎಂದರು.

ಪುಷ್ಪಗಿರಿ ಮಠದ ಶ್ರೀ ಸೋಮಶೇಖರ ಸ್ವಾಮೀಜಿ ಮಾತನಾಡಿ, ರಾಜ್ಯದಲ್ಲಿ ಮಳೆ ಕೊರತೆ ಹಾಗೂ ಬರದ ವಾತಾವರಣವಿದ್ದರೂ ಹಳೇಬೀಡು ಕೆರೆ ಕೋಡಿ ಬಿದ್ದಿರುವುದು ದೈವಾನುಗ್ರಹ. ದಶಕಗಳ ಕಾಲ ರೈತರು, ಜನಪ್ರತಿನಿಧಿಗಳು ಹಾಗು ಸಾರ್ವಜನಿಕರು ನಡೆಸಿದ ಹೋರಾಟದ ಫಲವಾಗಿ ಕೆರೆಗೆ ನೀರು ಬಂದಿದೆ ಎಂದರು.

ಶಾಸಕ ಹೆಚ್.ಕೆ.ಸುರೇಶ್ ಅವರ ಅವಧಿಯಲ್ಲಿ ನೀರಾವರಿ ಕಾಮಗಾರಿಗೆ ವೇಗ ದೊರೆತಿದೆ. ಆದರೆ ತಾಂತ್ರಿಕ ಕಾರಣಗಳಿಂದ ಅಡುಗೂರು ಗ್ರಾಮಕ್ಕೆ ಇನ್ನೂ ನೀರು ತಲುಪಿಲ್ಲ. ಈ ಸಮಸ್ಯೆಯನ್ನು ಶೀಘ್ರ ಪರಿಹರಿಸಿ ಅಡುಗೂರಿಗೂ ನೀರು ಹರಿಸುವಂತೆ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಬೇಲೂರು ಕ್ಷೇತ್ರದ ನೀರಾವರಿ, ರಸ್ತೆ ಹಾಗೂ ಪ್ರವಾಸೋದ್ಯಮ ಅಭಿವೃದ್ಧಿಗೆ ಗಮನ ಹರಿಸಬೇಕು. ಈ ನಿಟ್ಟಿನಲ್ಲಿ ಶಾಸಕರ ಪ್ರಯತ್ನಕ್ಕೆ ನಾವು ಬೆಂಬಲಿಸುತ್ತೇವೆ. ಕೃಷಿ ಆಶಾದಾಯಕವಾಗಿ ಇರಬೇಕೆಂದರೆ ಉತ್ತಮ ನೀರಾವರಿ ವ್ಯವಸ್ಥೆ ಬೇಕು. ಆ ನಿಟ್ಟಿನಲ್ಲಿ ಕೆಲಸ ಆಗಬೇಕು ಎಂದು ತಿಳಿಸಿದರು.

ಪುಷ್ಪಗಿರಿ ಮಹಿಳಾ ಸ್ವಸಹಾಯ ಸಂಘಗಳ ಸದಸ್ಯರು, ಹಳೇಬೀಡು ಗ್ರಾಮಸ್ಥರು ಹಾಜರಿದ್ದರು.

# ಸೆ.25ಕ್ಕೆ ಮೆಚ್ಯೂರ್ಡ್ ಲವ್ ಸ್ಟೋರಿ ಚಲನಚಿತ್ರ ಬಿಡುಗಡೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಮಂಡ್ಯ ಮೂಲದ ಮನೀಷ್ ಗೌಡ ಮತ್ತು ಒಂದು ತಂಡ ಸೇರಿ ಮೆಚ್ಯೂರ್ಡ್ ಲವ್‌ಸ್ಟೋರಿ ಸಿನಿಮಾ ತಯಾರು ಮಾಡಿದ್ದು, ಮುಂದಿನ ಸೆ.25 ರಂದು ರಾಜ್ಯಾದ್ಯಂತ ಬಿಡುಗಡೆಯಾಗಲಿದೆ ಎಂದು ನಾಯಕ ಮನೀಶ್‌ಗೌಡ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, ಮನುರಾಜು ಸಿ.ಪಿ.ಹಣ ಹೂಡಿದ್ದು, ರಘು ಅವರು ನಿರ್ದೇಶನ ಮಾಡಿದ್ದಾರೆ. ನಾಗರಾಜು ಅವರ ಛಾಯಾಗ್ರಹಣವಿದ್ದು, ಮಿಹರ ಬಿ.ಜಿ ಅವರು ಸಂಗೀತ ಸಂಯೋಜನೆ ಮಾಡಿದ್ದಾರೆ ಎಂದರು.

ನಮಗೆ ಯಾರೂ ಗಾಡ್ ಫಾದರ್ ಇಲ್ಲ, ಆದರೆ ಒಳ್ಳೆಯ ತಂಡವಿದೆ, ಕಲೆ ಇದೆ. ಪ್ರೀತಿಯ ಶಕ್ತಿ, ಆಕರ್ಷಣೆ, ಕಳೆದು ಹೋದ ಪ್ರೀತಿ ಪಡೆಯುವುದೇಗೆ ಎಂಬುದು ಮೆಚ್ಯೂರ್ಡ್ ಲವ್ ಸ್ಟೋರಿ ಕಥಾವಸ್ತು. ಚಿತ್ರದಲ್ಲಿ ನಾಲ್ಕು ಸುಮಧುರ ಹಾಡುಗಳಿದ್ದು, ಈಗಾಗಲೇ ಬಿಡುಗಡೆಯಾಗಿರುವ ಟೀಸರ್‌ಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ ಎಂದರು.

ಬೆಂಗಳೂರು, ಮಂಡ್ಯ ಮತ್ತು ಸಕಲೇಶಪುರ ಮೊದಲಾದ ಕಡೆ ಚಿತ್ರೀಕರಣ ನಡೆದಿದ್ದು, ಪ್ರೀತಿ,



ಪ್ರೇಮದ ಜೊತೆಗೆ ಚಿತ್ರದಲ್ಲಿ ತಾಯಿ ವಾತ್ಸಲ್ಯ, ಮೌಲ್ಯವೂ ಇದೆ ಎಂದರು.

ಇದೇ ವೇಳೆ ಕನ್ನಡ ಚಿತ್ರರಂಗದಲ್ಲಿ ಯುವ ಕಲಾವಿದರಿಗೆ ಸೂಕ್ತ ವೇದಿಕೆ ಬೇಕಿದ್ದು, ಅದಕ್ಕಾಗಿ ಕಿಚ್ಚ ಸುದೀಪ್ ಅವರಂಥವರು ಆಸಕ್ತಿ ವಹಿಸಬೇಕು ಎಂದು ಮನವಿ ಮಾಡಿದರು.

ಕಲಾವಿದ ಹಾಸನದವರೇ ಆದ ಮಂಜು ಮಾತನಾಡಿ, ಈ ಸಿನಿಮಾದಲ್ಲಿ ನನಗೆ ಚಾಲೆಂಜಿಂಗ್ ಪಾತ್ರ ಸಿಕ್ಕಿದೆ. ಅನ್ಯಭಾಷೆಯ ವಿಲನ್ ಪಾತ್ರ ಮಾಡಿದ್ದು ಎಲ್ಲರೂ ಸಹಕಾರ ನೀಡಿ ಎಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಸಾಹಸ ಕಲಾವಿದ ಗಿರೀಶ್ ಇದ್ದರು.

# ಪ್ರಾಕೃತ ವಿಶ್ವವಿದ್ಯಾಲಯ ಲೋಕಾರ್ಪಣೆ: ಸಿಎಂಗೆ ಆಹ್ವಾನ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಶ್ರವಣಬೆಳಗೊಳ: ಶ್ರೀಕ್ಷೇತ್ರ ಶ್ರವಣಬೆಳಗೊಳದಲ್ಲಿ ನಿರ್ಮಾಣಗೊಂಡಿರುವ ಪ್ರಾಕೃತ ವಿಶ್ವವಿದ್ಯಾನಿಲಯ, ನೂತನ ಭೋಜನ ಶಾಲೆ ಹಾಗೂ ಸಭಾಭವನ ಕಟ್ಟಡಗಳ ಲೋಕಾರ್ಪಣೆ ಕಾರ್ಯಕ್ರಮಕ್ಕೆ ಆಗಮಿಸುವಂತೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಶ್ರೀದಿಗಂಬರ ಜೈನ ಮಹಾಸಂಸ್ಥಾನ ಮಠದ ವತಿಯಿಂದ ವಿಧಾನಸೌಧದಲ್ಲಿ ಭೇಟಿಯಾಗಿ ಆಹ್ವಾನಿಸಲಾಯಿತು.

ವಿಧಾನಸಭೆ ಅಧಿವೇಶನ ಮುಗಿದ ನಂತರ ಸಮಯ ತಿಳಿಸಲಾಗುವುದು ಎಂದು ಮುಖ್ಯಮಂತ್ರಿ ಭರವಸೆ ನೀಡಿದರು. ಶಾಸಕರಾದ ಸಿ.ಎನ್.ಬಾಲಕೃಷ್ಣ, ಕೆ.ಎಂ. ಶಿವಲಿಂಗೇಗೌಡ, ಸಂಸದ ಶ್ರೇಯಸ್ ಪಟೇಲ್, ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಎ.ಗೋಪಾಲಸ್ವಾಮಿ, ಶ್ರೀಮಠದ ಪ್ರತಿನಿಧಿಗಳಾದ ರಾಜೇಶ್ ಖನ್ನಾ, ಯಶಸ್ ಜೈನ್ ಇದ್ದರು.

ಶ್ರವಣಬೆಳಗೊಳದಲ್ಲಿ 2018 ರ ವಿಶ್ವವಿಖ್ಯಾತ ಗೊಮ್ಮಟೇಶ್ವರ ಭಗವಾನ್ ಶ್ರೀ ಭಗವಾನ್ ಬಾಹುಬಲ ಸ್ವಾಮಿ ಮಹಾಮಸ್ತಕಾಬಿಷೇಕ ಮಹೋತ್ಸವದ ಸಂದರ್ಭದಲ್ಲಿ ಪ್ರಾತಃಸ್ಮರಣೀಯ ಪರಮಪೂಜ್ಯ ಸಮಾಧಿಸ್ಥ ಕರ್ಮಯೋಗಿ ಚಾರುಕೀರ್ತಿ ಭಟ್ಟಾರಕ ಮಹಾಸ್ವಾಮಿಗಳವರ ಅಪೇಕ್ಷೆಯಂತೆ, ಆಗಿನ ಮುಖ್ಯಮಂತ್ರಿಗಳಾಗಿದ್ದ ಶ್ರೀ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರವು ಲೋಕೋಪಯೋಗಿ ಇಲಾಖೆಯ ಮೂಲಕ ರೂ. 25 ಕೋಟಿ ಅನುದಾನವನ್ನು ಮಂಜೂರು ಮಾಡಿ ಪ್ರಾಕೃತ ವಿಶ್ವವಿದ್ಯಾನಿಲಯದ ಭವ್ಯ ಕಟ್ಟಡ ನಿರ್ಮಾಣಕ್ಕೆ ಕಾರಣವಾಯಿತು.

ಅದೇ ರೀತಿಯಲ್ಲ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅನುದಾನದಡಿ ನಿರ್ಮಾಣಗೊಂಡಿರುವ ನೂತನ ಭೋಜನಶಾಲೆ ಹಾಗೂ ಆಡಿಟೋರಿಯಂ ಕಟ್ಟಡಗಳ ನಿರ್ಮಾಣ ಕಾರ್ಯವೂ ಯಶಸ್ವಿಯಾಗಿ ಪೂರ್ಣಗೊಂಡಿದೆ.

# ಬೆಳೆ ವಿಮೆಗೆ ನೋಂದಣಿ ಮಾಡಿಸಿಕೊಳ್ಳಲು ಸಲಹೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಮಳೆ ಕೊರತೆ ಹಾಗೂ ವಿವಿಧ ರೋಗಬಾಧೆಯಿಂದ ಬೆಳೆಗಳು ಹಾನಿಗೀಡಾಗಿದ್ದು ರೈತರು ಬೆಳೆ ವಿಮೆಗೆ ನೋಂದಣಿ ಮಾಡಿಕೊಂಡು ಲಾಭ ಪಡೆಯಬೇಕು ಎಂದು ಶಾಸಕ ಸಿ.ಎನ್.ಬಾಲಕೃಷ್ಣ ಹೇಳಿದರು.

ಪಟ್ಟಣದ ಟಿಎಪಿಸಿಎಂಎಸ್ ಸಭಾಂಗಣದಲ್ಲಿ ಗುರುವಾರ ನಡೆದ ಬೆಳೆ ವಿಮೆ ಯೋಜನೆ ಕುರಿತ ತಾಲ್ಲೂಕಿನ ಎಲ್ಲಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಕಾಯದರ್ಶಿಗಳ ಸಭೆಯಲ್ಲಿ ಮಾತನಾಡಿದ ಅವರು, ಮುಂಗಾರು ಮಳೆ ಈ ಬಾರಿ ಕೈಕೊಟ್ಟಿರುವುದರಿಂದ ಅನ್ನದಾತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಅದೇ ಪರಿಸ್ಥಿತಿ ಮುಂದುವರಿದರೆ ಮುಂದಿನ ದಿನಗಳಲ್ಲಿ ಬರಗಾಲ ಎದುರಾಗುವ ಸಾಧ್ಯತೆ ಇದೆ ಎಂದರು.

ಆಷಾಢದಲ್ಲೂ ಬೇಸಿಗೆಯ ವಾತಾವರಣ ನಿರ್ಮಾಣವಾಗಿದೆ. ಕಳೆದ ವರ್ಷ ಇಷ್ಟೊತ್ತಿಗೆ ಜಲಾಶಯಗಳು ಭರ್ತಿಯಾಗಿದ್ದವು. ಈಗ ಕುಡಿಯುವ ನೀರಿಗೆ ಸಮಸ್ಯೆಯಾಗುತ್ತಿದೆ. ಮುಸುಕಿನ ಜೋಳಕ್ಕೆ ಬಿಳಿಸುಳಿ ರೋಗ ಹರಡುತ್ತಿರುವ ಹಿನ್ನಲೆಯಲ್ಲಿ ಯಾವುದೇ ಅರ್ಹ ರೈತರು ವಿಮೆಯಿಂದ ವಂಚಿತರಾಗದಂತೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ಬ್ಯಾಂಕ್, ಕೃಷಿ ಹಾಗೂ ತೋಟಗಾರಿಕೆ ಇಲಾಖೆ ಅಧಿಕಾರಿಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂದರು.

ಗ್ರಾಮ ಮಟ್ಟದಲ್ಲಿ ರೈತರಿಗೆ ಬೆಳೆ ವಿಮೆಯ ಮಹತ್ವ, ನೋಂದಣಿ ವಿಧಾನ, ಕೊನೆಯ ದಿನಾಂಕ ಹಾಗೂ ಯೋಜನೆಯ ಪ್ರಯೋಜನಗಳ ಕುರಿತು ಮಾಹಿತಿ ನೀಡಬೇಕು. ಯೋಜನೆಯ ಪ್ರಗತಿಯನ್ನು ನಿರಂತರವಾಗಿ



ಪರಿಶೀಲಿಸಿ ತಾಲ್ಲೂಕಿನಲ್ಲಿ ಶೇ.100 ರಷ್ಟು ಅರ್ಹ ರೈತರನ್ನು ಬೆಳೆ ವಿಮೆ ವ್ಯಾಪ್ತಿಗೆ ತರುವ ನಿಟ್ಟಿನಲ್ಲಿ ಅಧಿಕಾರಿಗಳು ಕಾರ್ಯನಿರ್ವಹಿಸಬೇಕು ಎಂದು ತಿಳಿಸಿದರು.

ಕಳೆದ ಸಾಲಿನ ಹಂಗಾಮಿನಲ್ಲಿ 22 ಸಾವಿರಕ್ಕೂ ಹೆಚ್ಚು ರೈತರು ಬೆಳೆ ವಿಮೆಗೆ ನೋಂದಣಿಯಾಗಿದ್ದರು. ಈ ಹಂಗಾಮಿನಲ್ಲಿ 25 ಸಾವಿರಕ್ಕೂ ಹೆಚ್ಚು ವಿಮೆ ನೋಂದಣಿಗೆ ಕ್ರಮ ವಹಿಸಲು ಸೂಕ್ತ ನಿರ್ದೇಶನ ನೀಡಿದರು.

ಮಳೆ ಮತ್ತು ನೀರಾವರಿ ಆಶ್ರಿತ ಪ್ರದೇಶಗಳಲ್ಲಿ ಜೋಳಕ್ಕೆ ಜು. 31 ಹಾಗೂ ರಾಗಿ ಬೆಳೆಗೆ ಆ. 14 ವಿಮಾ ಕಂತು ಪಾವತಿಗೆ ಕೊನೆಯ ದಿನವಾಗಿದೆ. ತಾಲ್ಲೂಕಿನಲ್ಲಿ ಈ ವರೆಗೆ 2200 ಹೆಕ್ಟೇರ್‌ನಲ್ಲಿ ಜೋಳ ಬಿತ್ತನೆ ಮಾಡಲಾಗಿದೆ. ಬಿಳಿಸುಳಿ ರೋಗಬಾಧೆ ಹತೋಟಿಗೆ ಮುಂಜಾಗ್ರತಾ ಕ್ರಮವಾಗಿ ಮಣ್ಣಿನಲ್ಲಿರುವ ರೋಗಾಣುಗಳ ಪ್ರಮಾಣವನ್ನು ಕಡಿಮೆ ಮಾಡಲು ಬೆಳೆಗಳ ಮಧ್ಯ ಅಂತರ ಕಾಪಾಡಿ ಭೂಮಿ ಒಣಗಲು ಬಿಡಬೇಕು. ಪರ್ಯಾಯ ಬೆಳೆಯತ್ತ ರೈತರು ಗಮನ ಹರಿಸಬೇಕು ಎಂದು ತಿಳಿಸಿದರು.

ಕೃಷಿ ಇಲಾಖೆ ಉಪನಿರ್ದೇಶಕಿ ಕೋಕಿಲಾ ಮಾತನಾಡಿ, ಜಿಲ್ಲೆಯಲ್ಲಿ ಶೇ.30 ಮಳೆಯ ಕೊರತೆಯುಂಟಾಗಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಮಳೆಯ ಪ್ರಮಾಣವೂ ಕಡಿಮೆ. ಜಿಲ್ಲೆಯಲ್ಲಿ ಬೆಳಗಳಿಗೆ ಶೇ.50ರಷ್ಟು ರೋಗಬಾಧೆ ಕಾಣಿಸಿಕೊಂಡಿದೆ. ಪ್ರತಿ ಎಕರೆಗೆ ರಾಗಿ ಬೆಳೆಗೆ 404 ರೂ. ವಿಮಾಕಂತು ಪಾವತಿಸಬೇಕು. ಬಿತ್ತನೆ ಬೀಜವನ್ನು ಈಗಾಗಲೇ ಪರೀಕ್ಷೆ ಮಾಡಿ ನೀಡಲಾಗುತ್ತಿದೆ. ಮಣ್ಣಿನ ಮೂಲಕವೂ ರೋಗ ಹರಡುವುದರಿಂದ ನಿಯಂತ್ರಣ ಹತೋಟಿಗೆ ಬರುತ್ತಿಲ್ಲವೆ ಎಂದರು.

ತಾಲ್ಲೂಕು ಸಹಾಯಕ ನಿರ್ದೇಶಕ ಮೋಹನ್ ಕುಮಾರ್ ಅವರು ಮಾತನಾಡಿ, ರಸಗೊಬ್ಬರ ಮಾರಾಟ ಮಾಡಲು ಸೊಸೈಟಿಗಳಿಗೆ ಅಗತ್ಯ ನೆರವು ಇಲಾಖೆಯಿಂದ ನೀಡಲಾಗುವುದು. ಕಳೆದ ವರ್ಷ 22 ಸಾವಿರ ರೈತರು ಬೆಳೆ ವಿಮೆ ಮಾಡಿಸಿದ್ದು, ಈ ವರ್ಷ 7 ಸಾವಿರ ರೈತರು ಮಾತ್ರ ಮಾಡಿಸಿದ್ದಾರೆ. ಗೊಬ್ಬರ ಮಾರಾಟಕ್ಕೆ ತಾಂತ್ರಿಕ ಸಮಸ್ಯೆಯಿದ್ದರೆ ಪಕ್ಕದ ಸೊಸೈಟಿಗಳ ಮೂಲಕವೂ ತರಿಸಿಕೊಂಡು ಮಾರಾಟ ಮಾಡಬಹುದು ಎಂದು ಹೇಳಿದರು.

# ಕ್ರಾಫರ್ಡ್ ಆಸ್ಪತ್ರೆಗೆ ಶಾಸಕ ಸಿಮೆಂಟ್ ದಿಢೀರ್ ಭೇಟಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಪಟ್ಟಣದ ಕ್ರಾಫರ್ಡ್ ಸಾರ್ವಜನಿಕ ಆಸ್ಪತ್ರೆಗೆ ಶಾಸಕ ಸಿಮೆಂಟ್ ಮಂಜು ಅವರು ಗುರುವಾರ ದಿಢೀರ್ ಭೇಟಿ ನೀಡಿ ರೋಗಿಗಳಿಗೆ ಯಾವುದೇ ಸಮಸ್ಯೆಯಾಗದಂತೆ ಕ್ರಮ ವಹಿಸುವಂತೆ ಸೂಚಿಸಿದರು.

ಮೂಳೆ ಮತ್ತು ಕೀಲು ತಜ್ಞರ ವಿಭಾಗದಲ್ಲಿ ಸರದಿ ಸಾಲಿನಲ್ಲಿ ಅಧಿಕ ಸಂಖ್ಯೆಯಲ್ಲಿ ರೋಗಿಗಳು ನಿಂತಿದ್ದನ್ನು ಕಂಡು ಟೋಕನ್ ವ್ಯವಸ್ಥೆ ಮಾಡಿ ಬೇಗ ಬೇಗ ಚಿಕಿತ್ಸೆ ನೀಡಿ ಕಳುಹಿಸಬೇಕು. ವಾರ್ಡ್‌ಗಳಲ್ಲಿ ಸ್ವಚ್ಛತೆ ಕಾಪಾಡಬೇಕು. ಸಾರ್ವಜನಿಕರಿಗೆ ಸೇವೆ ಒದಗಿಸುವಲ್ಲಿ ವಿಳಂಬ ಮಾಡಿದರೆ ಸಹಿಸುವುದಿಲ್ಲವೆಂದು ಹೇಳಿದರು.

ಆಸ್ಪತ್ರೆಯ ವಿವಿಧ ವಾರ್ಡ್, ಡಯಾಲಿಸಿಸ್ ಕೇಂದ್ರ, ಆಯುಷ್ ವಿಭಾಗ ಸೇರಿ ಎಲ್ಲಾ ವಿಭಾಗಗಳಿಗೆ ಭೇಟಿ ನೀಡಿ ರೋಗಿಗಳು ಹಾಗು ಸಾರ್ವಜನಿಕರ ಕುಂದು ಕೊರತೆ ಆಲಿಸಿದರು.



ಡಯಾಲಿಸಿಸ್ ಕೇಂದ್ರದಲ್ಲಿ ಚಿಕಿತ್ಸೆ ಪಡೆಯುತ್ತಿರುವ ರೋಗಿಗಳೊಂದಿಗೆ ಚರ್ಚಿಸಿದರು.

ಪರಿಶೀಲನೆ ವೇಳೆ ಆಯುಷ್ ವಿಭಾಗದ ಕಾರ್ಯವೈಖರಿ, ಶೌಚಾಲಯಗಳ ನಿರ್ವಹಣೆ ಹಾಗೂ ವಾರ್ಡ್‌ಗಳಲ್ಲಿ ಹಳೆಯ ಬೆಡ್‌ಶೀಟ್‌ಗಳನ್ನು ಕಂಡು ವೈದ್ಯಾಧಿಕಾರಿ ಡಾ. ಅರುಣ್ ಕುಮಾರ್ ಅವರ ಕಾರ್ಯವೈಖರಿಗೆ ಅಸಮಾಧಾನ ವ್ಯಕ್ತಪಡಿಸಿದರು. ಆಸ್ಪತ್ರೆಯ ಸ್ವಚ್ಛತೆ ಹಾಗೂ ಮೂಲಸೌಲಭ್ಯಗಳಿಗೆ ಆದ್ಯತೆ ನೀಡಬೇಕೆಂದು ಸೂಚಿಸಿದರು.

ಬಳಿಕ ಮಾತನಾಡಿದ ಅವರು, ಸರ್ಕಾರಿ ಆಸ್ಪತ್ರೆ ಬಡವರ ಜೀವನಾಡಿಯಾಗಿದ್ದು, ರೋಗಿಗಳಿಗೆ ಗುಣಮಟ್ಟದ ಚಿಕಿತ್ಸೆ, ಸ್ವಚ್ಛ ವಾತಾವರಣ ಹಾಗೂ ಗೌರವಯುತ ಸೇವೆ ದೊರೆಯಬೇಕು. ವೈದ್ಯರು ಮತ್ತು ಸಿಬ್ಬಂದಿ ಯಾವುದೇ ನಿರ್ಲಕ್ಷ್ಯವಿಲ್ಲದೆ ಸೇವಾ ಮನೋಭಾವದಿಂದ ಕಾರ್ಯನಿರ್ವಹಿಸಬೇಕು ಎಂದು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

# ಇಂದು ಅಮರ ದನಿ-ಅನಂತ ನೆನಪು ಕಾರ್ಯಕ್ರಮ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಜು. 17ರ ಶುಕ್ರವಾರ ಸಂಜೆ 5.30 ಗಂಟೆಗೆ ನಾದ ದೇವತೆಯ ಸ್ಮರಣಾಂಜಲಿ ಅಮರ ದನಿ-ಅನಂತ ನೆನಪು ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಡಾ.ಎಚ್.ಎಲ್.ಮಲ್ಲೇಶಗೌಡ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, ಖ್ಯಾತ ಹಿನ್ನೆಲೆ ಗಾಯಕಿ ಡಾ. ಎಸ್.ಜಾನಕಿ ಅವರ ಸ್ಮರಣಾರ್ಥ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಶುಕ್ರವಾರದ ಅರ್ಥಪೂರ್ಣ ಕಾರ್ಯಕ್ರಮಕ್ಕೆ ರೋಟರಿ 3182 ವಲಯ 9ರ ರೋಟರಿ ಕ್ಲಬ್, ಲಯನ್ಸ್ ಕ್ಲಬ್, ಡಾ.ರಾಜಕುಮಾರ್ ಅಭಿಮಾನಿಗಳ ಸಂಘ, ವಿದ್ಯಾನಗರ ಕುವೆಂಪು ಯುವಕರ ಬಳಗ, ಶ್ರೀ ವಿದ್ಯಾ ಗಣಪತಿ ಗೆಳೆಯರ ಬಳಗ ಹಾಗೂ ವಿವಿಧ ಕನ್ನಡಪರ ಸಂಘಟನೆಗಳು




ಕೈ ಜೋಡಿಸಿವೆ ಎಂದರು.

ಗಾಯಕರಾದ ಬನುವಾ ಗುರುದತ್, ಮಂಜುನಾಥ್, ವೇದಶ್ರೀ, ದೇವರಾಜ್ ಜಾಡಘಟ್ಟ ಮತ್ತು ಕು.ಸಂಗೀತಾ ಯೋಗೀಶ್ ಅವರು ಎಸ್.ಜಾನಕಿ ಅವರ ಹಾಡುಗಳಿಗೆ ಧ್ವನಿಯಾಗಲಿದ್ದಾರೆ ಎಂದರು.

ಡಾ.ರಾಜಕುಮಾರ್ ಅಭಿಮಾನಿಗಳ ಸಂಘದ ಬಾಳ್ಳುಗೋಪಾಲ್ ಮಾತನಾಡಿ,ಹಾಡುಗಾರಿಕೆ ಜೊತೆಗೆ ಹೆಣ್ಣುಮಕ್ಕಳ ಪರವಾಗಿ ಹೋರಾಟದ ದನಿಯೂ ಎಸ್.ಜಾನಕಿ ಆಗಿದ್ದರು. ಹೋರಾಟದ ಮನೋಭಾವ ಚಿಂತನೆ ಇತ್ತು. ಅವರೆಂದೂ ಪ್ರಚಾರ ಬಯಸಲಿಲ್ಲ. ಅವರ ನಗುವ ಶೈಲಿ ಆಕರ್ಷಣೀಯ. ಅವರನ್ನು ನೆನೆಯುವ ನಿಟ್ಟಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ ಅರ್ಥಪೂರ್ಣ ಕಾರ್ಯಕ್ರಮ ಆಯೋಜಿಸಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ರೋಟರಿ ಜಿಲ್ಲೆ3182ರ ಝೋನ್ 9ರ ಸಾಂಸ್ಕೃತಿಕ ಸಂಯೋಜಕ ರೊ.ವಜ್ರಕುಮಾರ್, ಲಯನ್ಸ್ ಕ್ಲಬ್ ಹಾಸನ ಅಧ್ಯಕ್ಷ ವೆಂಕಟೇಶ್, ಕನ್ನಡ ಸಾಹಿತ್ಯ ಪರಿಷತ್ ಸಂಘಟನಾ ಕಾರ್ಯದರ್ಶಿ ಆರ್.ಬಿ.ಶಂಕರ್, ತಾಲ್ಲೂಕು ಅಧ್ಯಕ್ಷ ಮಮತೇಶ್, ವಿದ್ಯಾನಗರ ಕುವೆಂಪು ಯುವಕರ ಬಳಗದ ಅಧ್ಯಕ್ಷ ಗಿರೀಶ್, ವಿದ್ಯಾ ಗಣಪತಿ ಸೇವಾ ಸಮಿತಿಯ ಸುಮಂತ್ ಹಾಜರಿದ್ದರು.

# ಮುಸುಕಿನ ಜೋಳಕ್ಕೆ ರೋಗಬಾಧೆ: ನೆರವಿಗೆ ಸಂಸದರ ಮನವಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜಿಲ್ಲೆಯಲ್ಲಿ ಮೆಕ್ಕೆಜೋಳ ಬೆಳೆ ಬಿಳಿಸುಳಿ ರೋಗದಿಂದ ಹಾಳಾಗಿದ್ದು, ಕೂಡಲೇ ಪಿ.ಎಂ.ಎಫ್.ಬಿ.ವೈ ಯೋಜನೆಯಡಿ ಪರಿಹಾರ ಘೋಷಣೆ ಮಾಡಬೇಕೆಂದು ಸಂಸದ ಶ್ರೇಯಸ್ ಎಂ.ಪಟೇಲ್ ಅವರು ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಇಲಾಖೆ ಕಾರ್ಯದರ್ಶಿ ಅತೀಶ್ ಚಂದ್ರ ಅವರಿಗೆ ಮನವಿ ಸಲ್ಲಿಸಿದರು.

ಹಂಗಾಮಿನ ಪ್ರತಿಕೂಲತೆ/ಸ್ಥಳೀಯ ವಿಪತ್ತು ನಿಬಂಧನೆಗಳ ಅಡಿಯಲ್ಲಿ ಘೋಷಣೆ ಮತ್ತು ಬಾಧಿತ ರೈತರಿಗೆ ತಕ್ಷಣದ ಪರಿಹಾರ ಕೊಡುವಂತೆ ಕೋರಿದರು.

ಪ್ರಸ್ತುತ ಖಾರೀಫ್ ಹಂಗಾಮಿನಲ್ಲಿ ಜಿಲ್ಲೆಯಲ್ಲಿ ಅಂದಾಜು 71,000 ಹೆಕ್ಟೇರ್ ಪ್ರದೇಶದಲ್ಲಿ ಜೋಳವನ್ನು ಬೆಳೆದಿದ್ದಾರೆ. ದುರದೃಷ್ಟವಶಾತ್, ಸುಮಾರು 40,000 ಹೆಕ್ಟೇರ್ ಪ್ರದೇಶವು ಈಗಾಗಲೇ ಈ ರೋಗದಿಂದ ಬಾಧಿತವಾಗಿದ್ದು, ಇದರಿಂದ



ತೀವ್ರ ಬೆಳೆ ನಷ್ಟ ಮತ್ತು ಸಾವಿರಾರು ರೈತ ಕುಟುಂಬಗಳಿಗೆ ಅಪಾರ ಆರ್ಥಿಕ ಸಂಕಷ್ಟ ಉಂಟಾಗಿದೆ. ಸಮಯಕ್ಕೆ ಸರಿಯಾಗಿ ಮಧ್ಯಪ್ರವೇಶಿಸದಿದ್ದರೆ, ರೋಗವು ಇನ್ನಷ್ಟು ಹರಡಿ ಗಮನಾರ್ಹ ಉತ್ಪಾದನಾ ನಷ್ಟಕ್ಕೆ ಕಾರಣವಾಗುವ ಸಾಧ್ಯತೆ ಇದೆ. ರೋಗದ ತೀವ್ರತೆ ಮತ್ತು ರೈತರ ಮೇಲೆ ಅದರ ವಿನಾಶಕಾರಿ ಪರಿಣಾಮವನ್ನು ಪರಿಗಣಿಸಿ, ಸಚಿವಾಲಯವು ತುರ್ತಾಗಿ ಕ್ರಮ ಕೈಗೊಳ್ಳಬೇಕೆಂದು ವಿನಂತಿಸಿದರು.

ಕೇಂದ್ರ ತಜ್ಞರ ತಂಡವನ್ನು ಹಾಸನ ಜಿಲ್ಲೆಗೆ ಕಳುಹಿಸಿ ಬೆಳೆ ಹಾನಿಯ ಪ್ರಮಾಣ ಮೌಲ್ಯಮಾಪನ ಮಾಡಿಸುವುದು. ಐಸಿಎಆರ್ ಸಸ್ಯ ಸಂರಕ್ಷಣೆ, ಸಂಪರ್ಕ ತಡೆ ಮತ್ತು ಸಂಗ್ರಹಣಾ ನಿರ್ದೇಶನಾಲಯ ಮತ್ತು ಸಂಬಂಧಿಸಿದ ಇತರ ಸಂಸ್ಥೆಗಳಿಗೆ ತಕ್ಷಣದ ತಾಂತ್ರಿಕ ಬೆಂಬಲ ನೀಡಲು ಮತ್ತು ಪರಿಣಾಮಕಾರಿ ರೋಗ ನಿರ್ವಹಣಾ ಕ್ರಮಗಳನ್ನು ಶಿಫಾರಸು ಮಾಡಲು ನಿರ್ದೇಶನ ನೀಡುವುದು.

ಹಾಸನ ಜಿಲ್ಲೆಯಲ್ಲಿ ಬಿಳಿಸುಳಿ ರೋಗವು ಹೆಚ್ಚಾಗಿ ಹರಡಿರುವುದನ್ನು ಪರಿಗಣಿಸಿ, ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ ಕಾರ್ಯಾಚರಣೆ ಮಾರ್ಗಸೂಚಿ ಅಡಿಯಲ್ಲಿ ಅನ್ವಯವಾಗುವಂತೆ ಮಧ್ಯ-ಹಂಗಾಮಿನ ಪ್ರತಿಕೂಲ ಮತ್ತು/ಅಥವಾ ಸ್ಥಳೀಯ ವಿಪತ್ತು ನಿಬಂಧನೆಗಳ ಅಡಿಯಲ್ಲಿ, ಅರ್ಹ ವಿಮೆ ಮಾಡಿದ ರೈತರಿಗೆ ಬೆಳೆ ನಷ್ಟಕ್ಕೆ ಸಕಾಲದಲ್ಲಿ ಪರಿಹಾರ ಮತ್ತು ಆರ್ಥಿಕ ನೆರವು ದೊರೆಯುವಂತೆ ಮಾಡಬೇಕು ಎಂದು ಕೋರಿದರು.

ಕ'ನಾ೯ಟಕ' ಸ'ಕಾ೯ರ',

ಅನುಷ್ಠಾನಗೊಳಿಸುವ ವಿಮಾ ಕಂಪನಿಗಳು ಮತ್ತು ಸಂಬಂಧಿಸಿದ ಎಲ್ಲಾ ಸಂಸ್ಥೆಗಳಿಗೆ ತಕ್ಷಣವೇ ಬೆಳೆ ನಷ್ಟದ ಮೌಲ್ಯಮಾಪನ ಕೈಗೊಳ್ಳಲು, ಪಿಎಂಎಫ್‌ಬಿವೈಯ ಸೂಕ್ತ ನಿಬಂಧನೆಗಳನ್ನು ಜಾರಿಗೆ ತರಲು ಮತ್ತು ವಿಮಾ ಕ್ಲೇಮ್‌ಗಳ ಹಾಗೂ ಬಾಧಿತ ರೈತರಿಗೆ ಪರಿಹಾರದ ತ್ವರಿತ ವಿಲೇವಾರಿಯನ್ನು ಖಚಿತಪಡಿಸಲು ಸಲಹೆ ನೀಡುವಂತೆ ಕೋರಿದ್ದಾರೆ.

ಜಿಲ್ಲೆಯ 71,000 ಹೆಕ್ಟೇರ್ ಪ್ರದೇಶದ ಪೈಕಿ ಸುಮಾರು 40,000 ಹೆಕ್ಟೇರ್ ಜೋಳವು ಈಗಾಗಲೇ ಬಾಧಿತವಾಗಿದೆ ಎಂಬುದನ್ನು ಪರಿಗಣಿಸಿ, ಬಾಧಿತ ರೈತರಿಗೆ ತಕ್ಷಣದ ಪರಿಹಾರ ತಲುಪುವಂತೆ ಮತ್ತು ಮುಂದಿನ ನಷ್ಟ ತಡೆಯುವ ಸಲುವಾಗಿ ಈ ವಿಷಯದಲ್ಲಿ ಕೂಡಲೇ ಮಧ್ಯೆ ಪ್ರವೇಶ ಮಾಡುವಂತೆ ವಿನಂತಿಸಿದ್ದಾರೆ.

ಕನ್ನಡ ಪೋಸ್ಟ್

E-mail : kannadapostnews@gmail.com facebook.com / ಕನ್ನಡ post



# ಕೃಷಿಯಲ್ಲಿ ಆಧುನಿಕತೆ ಅಳವಡಿಸಿಕೊಳ್ಳಲು ಸಲಹೆ

## ಶಣವಿನಕುಪ್ಪೆ ಗ್ರಾಮದಲ್ಲಿ ಪ್ರಾತ್ಯಕ್ಷಿಕೆ | ಡ್ರೋನ್‌ನಿಂದ ಔಷಧ ಸಿಂಪಡಣೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ಕೃಷಿಯಲ್ಲಿ ಆಧುನಿಕ ತಂತ್ರಜ್ಞಾನ ಅಳವಡಿಸುವ ಮೂಲಕ ಉತ್ಪಾದನಾ ವೆಚ್ಚ ಕಡಿಮೆ ಮಾಡಿ, ಉತ್ಪಾದಕತೆಯನ್ನು ಹೆಚ್ಚಿಸುವ ಉದ್ದೇಶದಿಂದ ತೋಟಗಾರಿಕೆ ಇಲಾಖೆ ವತಿಯಿಂದ ತಾಲೂಕಿನ ಶಣವಿನಕುಪ್ಪೆ ಗ್ರಾಮದ ರೈತ ಸಂತೋಷ್ ಅವರ ಆಲೂಗೆಡ್ಡೆ ಬೆಳೆಯಲ್ಲಿ ಡ್ರೋನ್ ಮೂಲಕ ಔಷಧ ಸಿಂಪಡಿಸುವ ಪ್ರಾತ್ಯಕ್ಷಿಕೆಯನ್ನು ನಡೆಸಲಾಯಿತು.

ಆಧುನಿಕ ಕೃಷಿ ಪದ್ಧತಿಗಳ ಬಗ್ಗೆ ರೈತರಲ್ಲಿ ಜಾಗೃತಿ ಮೂಡಿಸುವುದು ಹಾಗೂ ಔಷಧದ ಸಮರ್ಪಕ ಬಳಕೆಗೆ ಉತ್ತೇಜನ ನೀಡುವ ಉದ್ದೇಶದಿಂದ ಆಯೋಜಿಸಿದ್ದ ಈ ಕಾರ್ಯಕ್ರಮದಲ್ಲಿ ಸ್ಥಳೀಯ ರೈತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಡ್ರೋನ್ ತಂತ್ರಜ್ಞಾನದ ಕಾರ್ಯವೈಖರಿಯನ್ನು ವೀಕ್ಷಿಸಿ ಮಾಹಿತಿ ಪಡೆದುಕೊಂಡರು.

ಪ್ರಾತ್ಯಕ್ಷಿಕೆಗೆ ಚಾಲನೆ ನೀಡಿ ಮಾತನಾಡಿದ ತೋಟಗಾರಿಕೆ ಇಲಾಖೆ ಅಧಿಕಾರಿ ರಾಜೇಶ್, ಕೃಷಿಯಲ್ಲಿ ಔಷಧಿ ಸಿಂಪಡಣೆ ವೈಜ್ಞಾನಿಕ ರೀತಿಯಲ್ಲಿ ನಡೆಯುವುದು ಅತ್ಯಂತ ಮುಖ್ಯವಾಗಿದೆ. ಸಿಂಪಡಿಸುವ ಔಷಧಿ ವ್ಯರ್ಥವಾಗದಂತೆ ನೋಡಿಕೊಳ್ಳಬೇಕು. ಬೆಳೆಗಳಿಗೆ ಬಳಸುವ ಔಷಧವು ನೇರವಾಗಿ ಗಿಡಗಳಿಗೆ ತಾಕುವಂತೆ ಸಿಂಪಡಿಸಿದಾಗ ಮಾತ್ರ



ಅದರ ಪರಿಣಾಮಕಾರಿತ್ವ ಹೆಚ್ಚುತ್ತದೆ. ಈ ನಿಟ್ಟಿನಲ್ಲಿ ಡ್ರೋನ್ ತಂತ್ರಜ್ಞಾನ ರೈತರಿಗೆ ಅತ್ಯಂತ ಉಪಯುಕ್ತ ಸಾಧನವಾಗಿದೆ ಎಂದು ಹೇಳಿದರು.

ಡ್ರೋನ್ ಬಳಕೆಯಿಂದ ಕಡಿಮೆ ಸಮಯದಲ್ಲೇ ಹೆಚ್ಚಿನ ಪ್ರದೇಶಕ್ಕೆ ಸಮರ್ಪಕವಾಗಿ ಔಷಧ ಸಿಂಪಡಣೆ ಮಾಡಬಹುದು. ಸಾಂಪ್ರದಾಯಿಕ ವಿಧಾನದಲ್ಲಿ ಎದುರಾಗುವ ಕಾರ್ಮಿಕರ ಕೊರತೆ ಸಮಸ್ಯೆಯನ್ನು ನಿವಾರಿಸುವುದರ ಜೊತೆಗೆ ಔಷಧದ ಅನಗತ್ಯ ವ್ಯರ್ಥವೂ ತಪ್ಪುತ್ತದೆ. ಇದರಿಂದ ರೈತರ ಉತ್ಪಾದನಾ ವೆಚ್ಚ ಕಡಿಮೆಯಾಗುವುದಲ್ಲದೆ, ಕೃಷಿ ಕಾರ್ಯಗಳನ್ನು ವೇಗವಾಗಿ ಪೂರ್ಣಗೊಳಿಸಲು ಸಾಧ್ಯವಾಗುತ್ತದೆ ಎಂದು ವಿವರಿಸಿದರು.

ಇತ್ತೀಚಿನ ದಿನಗಳಲ್ಲಿ ಕೃಷಿ ಕ್ಷೇತ್ರದಲ್ಲಿ ಕಾರ್ಮಿಕರ ಕೊರತೆ ದೊಡ್ಡ ಸವಾಲಾಗಿ ಪರಿಣಮಿಸಿದೆ. ಇಂತಹ ಸಂದರ್ಭದಲ್ಲಿ ಡ್ರೋನ್ ತಂತ್ರಜ್ಞಾನ ರೈತರಿಗೆ ವರದಾನವಾಗಿದ್ದು, ಕಡಿಮೆ ಮಾನವ ಶ್ರಮದಲ್ಲಿ ಹೆಚ್ಚು ಪರಿಣಾಮಕಾರಿ ರೀತಿಯಲ್ಲಿ ಔಷಧ ಸಿಂಪಡಣೆ ನಡೆಸಲು ಸಹಕಾರಿಯಾಗಿದೆ. ಎತ್ತರದ ಬೆಳೆಗಳು ಹಾಗೂ ವಿಶಾಲ ಪ್ರದೇಶಗಳಲ್ಲಿಯೂ ಸಮಾನ ಪ್ರಮಾಣದಲ್ಲಿ ಔಷಧ ಸಿಂಪಡಿಸಲು ಈ ತಂತ್ರಜ್ಞಾನ ನೆರವಾಗುತ್ತದೆ ಎಂದು ತಿಳಿಸಿದರು.

ಡ್ರೋನ್ ಮೂಲಕ ಔಷಧ ಸಿಂಪಡಿಸುವುದರಿಂದ ರೈತರು ವಿಷಕಾರಿ ರಾಸಾಯನಿಕಗಳ ನೇರ ಸಂಪರ್ಕದಿಂದ ದೂರ ಉಳಿಯಬಹುದಾಗಿದೆ. ಇದರಿಂದ ಅವರ ಆರೋಗ್ಯ ಸುರಕ್ಷಿತವಾಗುವುದರ ಜೊತೆಗೆ ಪರಿಸರಕ್ಕೂ ಕಡಿಮೆ ಹಾನಿಯಾಗುತ್ತದೆ. ಬೆಳೆಗಳ ಆರೋಗ್ಯ ಉತ್ತಮವಾಗಿದ್ದು, ಉತ್ಪಾದನೆಯ ಗುಣಮಟ್ಟ ಮತ್ತು ಇಳುವರಿಯೂ ಹೆಚ್ಚುವ ಸಾಧ್ಯತೆ ಇದೆ ಎಂದು ಹೇಳಿದರು.

ಕೃಷಿಯಲ್ಲಿ ಆಧುನಿಕ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳುವುದು ಇಂದಿನ ಅಗತ್ಯವಾಗಿದೆ. ಹೊಸ ತಂತ್ರಜ್ಞಾನಗಳ ಬಳಕೆಯಿಂದ ಉತ್ಪಾದಕತೆ ಹೆಚ್ಚಿಸಿ, ವೆಚ್ಚವನ್ನು ನಿಯಂತ್ರಿಸುವುದು ಸಾಧ್ಯವಾಗುತ್ತದೆ. ಸರ್ಕಾರ ಮತ್ತು ತೋಟಗಾರಿಕೆ ಇಲಾಖೆ ಪರಿಚಯಿಸುತ್ತಿರುವ ಇಂತಹ ತಂತ್ರಜ್ಞಾನಗಳನ್ನು ರೈತರು ಹೆಚ್ಚಿನ ಸಂಖ್ಯೆಯಲ್ಲಿ ಸದುಪಯೋಗಪಡಿಸಿಕೊಳ್ಳಬೇಕು ಎಂದು ರಾಜೇಶ್ ಮನವಿ ಮಾಡಿದರು.

ಪ್ರಾತ್ಯಕ್ಷಿಕೆ ವೇಳೆ ಡ್ರೋನ್ ಹಾರಾಟ, ಔಷಧ ಮಿಶ್ರಣದ ವಿಧಾನ, ಸಿಂಪಡಣೆಯ ವೇಗ, ವ್ಯಾಪ್ತಿ ಹಾಗೂ ಸುರಕ್ಷತಾ ಕ್ರಮಗಳ ಕುರಿತು ರೈತರಿಗೆ ವಿವರವಾದ ಮಾಹಿತಿ ನೀಡಲಾಯಿತು.

ಆಲೂಗಡ್ಡೆ ಬೆಳೆಗಾರ ಸಂತೋಷ್ ಮಾತನಾಡಿ, ಕೃಷಿಯಲ್ಲಿ ದಿನದಿಂದ ದಿನಕ್ಕೆ ಕಾರ್ಮಿಕರ ಕೊರತೆ ಹೆಚ್ಚಾಗುತ್ತಿದೆ. ಇಂತಹ ಸಂದರ್ಭದಲ್ಲಿ ಡ್ರೋನ್ ಮೂಲಕ ಔಷಧ ಸಿಂಪಡಿಸುವುದು ರೈತರಿಗೆ ತುಂಬಾ ಅನುಕೂಲಕರವಾಗಿದೆ. ಕಡಿಮೆ ಸಮಯದಲ್ಲಿ ಇಡೀ ಹೊಲಕ್ಕೆ ಸಮರ್ಪಕವಾಗಿ ಔಷಧ ಸಿಂಪಡಣೆ ಮಾಡಬಹುದಾಗಿದೆ. ಔಷಧದ ವ್ಯರ್ಥವೂ ಕಡಿಮೆಯಾಗುತ್ತದೆ ಮತ್ತು ಬೆಳೆಗಳಿಗೆ ಸಮಾನ ಪ್ರಮಾಣದಲ್ಲಿ ತಲುಪುತ್ತದೆ. ಮುಖ್ಯವಾಗಿ ವಿಷಕಾರಿ ಔಷಧಗಳ ನೇರ ಸಂಪರ್ಕದಿಂದ ರೈತರು ದೂರ ಉಳಿಯುವುದರಿಂದ ಆರೋಗ್ಯಕ್ಕೂ ಸುರಕ್ಷತೆ ಸಿಗುತ್ತದೆ. ತೋಟಗಾರಿಕೆ ಇಲಾಖೆ ಇಂತಹ ಪ್ರಾತ್ಯಕ್ಷಿಕೆಗಳನ್ನು ಗ್ರಾಮ ಮಟ್ಟದಲ್ಲೇ ಹೆಚ್ಚಾಗಿ ನಡೆಸಿದರೆ ಹೆಚ್ಚಿನ ರೈತರು ಹೊಸ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲು ಮುಂದಾಗುತ್ತಾರೆ. ಸರ್ಕಾರವೂ ಡ್ರೋನ್ ಸೇವೆಗೆ ಹೆಚ್ಚಿನ ಸಹಾಯಧನ ಹಾಗೂ ಪ್ರೋತ್ಸಾಹ ನೀಡಿದರೆ ಸಣ್ಣ ಮತ್ತು ಮಧ್ಯಮ ರೈತರಿಗೆ ಹೆಚ್ಚಿನ ಅನುಕೂಲವಾಗುತ್ತದೆ ಎಂದರು.

ಆಧುನಿಕ ರೈತರನ್ನು ಸೆಳೆಯುವ ಉದ್ದೇಶದಿಂದ ಆಯೋಜಿಸಲಾದ ಈ ಪ್ರಾತ್ಯಕ್ಷಿಕೆ ಸ್ಥಳೀಯ ರೈತರಿಂದ ಉತ್ತಮ ಸ್ಪಂದನೆ ಪಡೆದಿದ್ದು, ಭವಿಷ್ಯದಲ್ಲಿ ಡ್ರೋನ್ ತಂತ್ರಜ್ಞಾನ ಬಳಕೆ ಇನ್ನಷ್ಟು ವಿಸ್ತರಿಸುವ ನಿರೀಕ್ಷೆ ಹೆಚ್ಚಿಸಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ರೈತರು ಡ್ರೋನ್ ಮೂಲಕ ಔಷಧ ಸಿಂಪಡಿಸುವ ವಿಧಾನವನ್ನು ಆಸಕ್ತಿಯಿಂದ ವೀಕ್ಷಿಸಿ, ತಂತ್ರಜ್ಞಾನದ ಪ್ರಯೋಜನಗಳ ಬಗ್ಗೆ ಅಧಿಕಾರಿಗಳೊಂದಿಗೆ ಸಂವಾದ ನಡೆಸಿ ಹಲವು ಮಾಹಿತಿಗಳನ್ನು ಪಡೆದುಕೊಂಡರು.

# ಮಾಡಾಳು ಸ್ವರ್ಣ ಗೌರಮ್ಮ ದೇಗುಲದಲ್ಲಿ ಅಮವಾಸ್ಯೆ ಪೂಜೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ತಾಲ್ಲೂಕಿನ ಮಾಡಾಳು ಗ್ರಾಮದ ಮೂಲಸ್ಥಾನ ಸ್ವರ್ಣ ಗೌರಮ್ಮ ದೇವಿ ದೇವಾಲಯದಲ್ಲಿ ಮಣ್ಣೆತ್ತಿನ ಅಮಾವಾಸ್ಯೆ ಅಂಗವಾಗಿ ಹಾರನಹಳ್ಳಿ ಕೋಡಿಮಠದ ಉತ್ತರಾಧಿಕಾರಿ ಚೇತನ್ ಮರಿದೇವರ ಪಾದಪೂಜೆ ಶ್ರದ್ಧಾ ಭಕ್ತಿಯಿಂದ ನೆರವೇರಿತು.

ಕಾರ್ಯಕ್ರಮದಲ್ಲಿ ಮಾತನಾಡಿದ ಚೇತನ್ ಮರಿದೇವರು, ಜೀವನದಲ್ಲಿ ನಂಬಿಕೆ, ವಿಶ್ವಾಸಗಳು ಕಳೆದು ಹೋದರೆ ಬಾಳುವುದು ಕಷ್ಟವಾಗುತ್ತದೆ. ಬುದ್ದಿ ಶಕ್ತಿ ಬೆಳದಂತೆ ಮನುಷ್ಯನ ಯೋಚನೆಗಳು ಬದಲಾಗುತ್ತವೆ. ಸಕಾರಾತ್ಮಕ ಚಿಂತನೆಗಳಿಂದ ಮಾತ್ರ ಉತ್ತಮ ಬದುಕು ಕಟ್ಟಿಕೊಳ್ಳಲು ಸಾಧ್ಯವಾಗುತ್ತದೆ ಎಂದರು.

ಸುಖ ಸಮೃದ್ಧಿ ನೆಲೆಗೊಳ್ಳಲು ಸಂಸ್ಕಾರ ಬಹಳ ಮುಖ್ಯ. ಸತ್ಯ, ಶುದ್ಧ ಸಂಸ್ಕಾರ ಬಲದಿಂದ ಸಂಸ್ಕೃತಿ ಬೆಳೆಯಲು ಸಾಧ್ಯವಾಗುತ್ತದೆ. ಅಯ್ಕನಹಳ್ಳಿ ಹಿರೇಮಠದ ಶ್ರೀ ಪ್ರಶಾಂತ ದೇವರು ಉಪಸ್ಥಿತರಿದ್ದರು.

ವಿಶೇಷ ಪೂಜೆ ನಿಮಿತ್ತ ದೇವಿಗೆ ವಿಧದ ಬಗೆಯ ಹೂವುಗಳಿಂದ ಅಲಂಕಾರ ಮಾಡಲಾಗಿತ್ತು. ದೇವಾಲಯವನ್ನು ಮಾವಿನ ತಳಿರು ತೋರಣ, ಬಾಳೆಕಂದು, ಬಣ್ಣ ಬಣ್ಣದ ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿತ್ತು. ಹಿರಿಹಾದರಹಳ್ಳಿಯ ಭಾಗ್ಯಮ್ಮ, ಹೆಚ್.ಎಂ.ಬಸವರಾಜ್ ಮತ್ತು ಮಕ್ಕಳು ದಾಸೋಹ ವ್ಯವಸ್ಥೆ ಕಲ್ಪಿಸಿದ್ದರು.

ಮಾಡಾಳು, ಸೀತಾಪುರ ಕೊಪ್ಪಲು, ಯರೆಹಳ್ಳಿ, ವೈ.ಜಿ.ಹಳ್ಳಿ, ಈ.ಹೊಸಳ್ಳಿ, ಕಿತ್ತನಕೆರೆ, ದೋಣನಕಟ್ಟೆ, ಶಂಕರನಹಳ್ಳಿ, ಡಿ.ಎಂ.ಕುರ್ಕೆ, ಶಶಿವಾಳ, ರಾಂಪುರ, ಹಾರನಹಳ್ಳಿ, ಅಣ್ಣಾಯಕನಹಳ್ಳಿ ಸೇರಿ ಸುತ್ತಲಿನ ಗ್ರಾಮಸ್ಥರು ಆಗ್ರಹಿಸಿದ್ದರು.

# ಸರ್ಕಾರಿ ಕಾಲೇಜಿಗೆ ಉಚಿತ ಪ್ರವೇಶ: ಎ.ಮಂಜು



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು : ಪಟ್ಟಣದಲ್ಲಿ ಕಾರ್ಯನಿರ್ವಹಿಸುತ್ತಿರುವ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ 2026-27ನೇ ಸಾಲಿನ ಬಿಎ (ಹೆಚ್‌ಇಪಿ, ಹೆಚ್‌ಎಸ್‌ಕೆ, ಹೆಚ್‌ಇಕೆ, ಹೆಚ್‌ಇಎಸ್, ಹೆಚ್‌ಇಇ) ಮತ್ತು ವಾಣಿಜ್ಯ ಹಾಗೂ ವಿಜ್ಞಾನಿ ವಿಭಾಗಕ್ಕೆ ಪ್ರವೇಶಾತಿ ನಡೆಯುತ್ತಿದ್ದು, ವಿದ್ಯಾರ್ಥಿಗಳು ತ್ವರಿತವಾಗಿ ಪ್ರವೇಶಾತಿ ಪಡೆದರೇ ಶುಲ್ಕ ವಿನಾಯಿತಿ ಹಾಗೂ ಬಡ ವಿದ್ಯಾರ್ಥಿಗಳಿಗೆ ಸಂಪೂರ್ಣವಾಗಿ ಉಚಿತವಾಗಿ ಪ್ರವೇಶಾತಿಗೆ ಅವಕಾಶ ಕಲ್ಪಿಸಲಾಗಿದೆ. ಈ ಪ್ರಯೋಜನವನ್ನು ತಾಲೂಕಿನ ವಿದ್ಯಾರ್ಥಿಗಳು ಮತ್ತು ಪೋಷಕರು ಪಡೆದುಕೊಳ್ಳಬೇಕೆಂದು ಶಾಸಕ ಎ.ಮಂಜು ಮನವಿ ಮಾಡಿದರು.

ಕಾಲೇಜಿನಲ್ಲಿ ಪ್ರಗತಿಯಲ್ಲಿರುವ ಆಡಿಟೋರಿಯಂ ಕಾಮಗಾರಿ ವೀಕ್ಷಣೆ ಮಾಡಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸರ್ಕಾರಿ ಕಾಲೇಜಿಗೆ ಹೆಚ್ಚಿನ ಪ್ರಮಾಣದಲ್ಲಿ ಗ್ರಾಮೀಣ ಭಾಗದ ರೈತರು, ಬಡ ಕುಟುಂಬದ ಮಕ್ಕಳು ಸೇರ್ಪಡೆಗೊಳ್ಳುತ್ತಿದ್ದು, ಈ ಸಲುವಾಗಿ ಪ್ರವೇಶಾತಿ ಪಡೆಯುವ ಎಲ್ಲಾ ವಿದ್ಯಾರ್ಥಿಗಳಿಗೂ ಪೀಸ್ ಪಡೆಯದೆ ಉಚಿತವಾಗಿ ಪ್ರವೇಶಾತಿಗೆ ಅವಕಾಶ ಮಾಡಿಕೊಡಲಾಗಿದೆ ಎಂದು ತಿಳಿಸಿದರು.

ತಾಲೂಕು ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಅಗತ್ಯ ಎಲ್ಲಾ ಮೂಲಸೌಕರ್ಯಗಳನ್ನು ಹೊಂದಿದೆ. ಪ್ರಮುಖವಾಗಿ ವಿದ್ಯಾರ್ಥಿಗಳಿಗೆ ಉಚಿತ ವಸತಿ ನಿಲಯ ವ್ಯವಸ್ಥೆ ಕೂಡ ಇದೆ..ನುರಿತ ಉಪನ್ಯಾಸಕರ ಬಳಗವನ್ನು ಹೊಂದಿದೆ.ಅಲ್ಲದೆ ವಿಷಯ ತಜ್ಞರುಗಳನ್ನು ಆಹ್ವಾನಿಸಿ ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಿ ಕೂಡ ಶೈಕ್ಷಣಿಕ ಅವಧಿಯಲ್ಲಿ ಕಲ್ಪಿಸಿಕೊಡಲಾಗಿದೆ.ಇದರಿಂದ ವಿದ್ಯಾರ್ಥಿಗಳಿಗೆ ಉದ್ಯೋಗ ಅವಕಾಶದ ಮಾರ್ಗದರ್ಶನಕ್ಕೆ ಒತ್ತುನೀಡಲಾಗಿದೆ ಎಂದರು.

ತಾಲೂಕಿನಲ್ಲಿಯೇ ಪ್ರಥಮ ಬಾರಿಗೆ 3.31 ಕೋಟಿ ರೂ. ವೆಚ್ಚದಲ್ಲಿ ಬೃಹತ್ ಆಡಿಟೋರಿಯಂ ನಿರ್ಮಿಸಲಾಗುತ್ತಿದೆ. ಇದರೊಂದಿಗೆ ಒಳಾಂಗಣ ಕ್ರೀಡಾಂಗಣ ಕೂಡ ನಿರ್ಮಾಣಗೊಳ್ಳಲಿದೆ. ಇಂತಹ ಅಭೂತಪೂರ್ವ ಸೌಲಭ್ಯವಿರುವ ಕಾಲೇಜಿಗೆ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ದಾಖಲಾಗುವಂತೆ ತಿಳಿಸಿದರು.

ಈಗಾಗಲೇ ಪ್ರವೇಶಾತಿ ಆರಂಭಗೊಂಡಿದ್ದು,ಆರ್ಥಿಕವಾಗಿ ಇರುವ ಬಡಕುಟುಂಬದ ಹಲವು ವಿದ್ಯಾರ್ಥಿಗಳು ಇಲ್ಲಿಯವರೆಗೆ ಪ್ರವೇಶಾತಿ ಪಡೆದಿರುವುದಿಲ್ಲ.ಇಂತಹ ವಿದ್ಯಾರ್ಥಿಗಳು ಕಾಲೇಜಿನ ಸಿಡಿಸಿ ವತಿಯಿಂದ ಪ್ರಥಮ ಬಿಎ. ಬಿಕಾಂ,ಬಿಎಸ್ಸಿ ತರಗತಿಗೆ ಉಚಿತವಾಗಿ ಪ್ರವೇಶಾತಿ ನೀಡಲಾಗುವುದು. ಪ್ರವೇಶಾತಿ ಬಯಸುವವರು ಹೆಚ್ಚಿನ ಮಾಹಿತಿಗಾಗಿ ಪ್ರಾಂಶುಪಾಲರನ್ನು(9902553014) ಸಂಪರ್ಕಿಸಬಹುದಾಗಿದೆ ಎಂದು ಮಾಹಿತಿ ನೀಡಿದರು.

# ಆಪರೇಷನ್ ರೈಸ್ ಅಭಿಯಾನಕ್ಕೆ ಎಸ್‌ಪಿ ಶುಭಾನ್ವಿತ ಚಾಲನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಮಾದಕ ವಸ್ತುಗಳ ಸೇವನೆಯಿಂದ ಯುವಕರನ್ನು ದೂರವಿಡುವ ಉದ್ದೇಶದಿಂದ ಜಿಲ್ಲಾ ಪೊಲೀಸ್ ಇಲಾಖೆ ಕೈಗೊಂಡಿರುವ ಆಪರೇಷನ್ ರೈಸ್ ಹಾಗು ಬೇಡ ಬ್ರೋ ವಿಶೇಷ ಅಭಿಯಾನಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭಾನ್ವಿತ ಅವರು ಬುಧವಾರ ಚಾಲನೆ ನೀಡಿದರು.

ನಗರದ ರಾಜೀವ್ ಎಂಜಿನಿಯರಿಂಗ್ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ 650ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಸಂಪನ್ಮೂಲ ವ್ಯಕ್ತಿಗಳು ಮಾದಕ ವಸ್ತುಗಳ ಸೇವನೆಯಿಂದ ಆಗುವ ದುಷ್ಪರಿಣಾಮಗಳ ಕುರಿತು ಅರಿವು ಮೂಡಿಸಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ




ಕಾರ್ಯದರ್ಶಿ ಜಿ.ಕೆ.ದಾಕ್ಷಾಯಿಣಿ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಶ್ರೀನಿಧಿ, ಹಿಮ್ಸ್‌ನ ಮನೋವೈದ್ಯಕೀಯ ವಿಭಾಗದ ಡಾ. ಸಂತೋಷ್, ಈಶಾ ಚೈತನ್ಯ ಫೌಂಡೇಶನ್‌ನ ಚೇತನ್ ಶರ್ಮಾ ಮತ್ತಿತರರಿದ್ದರು.

ಮಾದಕ ವಸ್ತುಗಳನ್ನು ತಿರಸ್ಕರಿಸುವ ಬಗ್ಗೆ ಯುವಕರಿಗೆ ಶಿಕ್ಷಣ ನೀಡುವುದು, ಮಾದಕ ವಸ್ತುಗಳ ಕಳ್ಳಸಾಗಣೆ ಮತ್ತು ದುರ್ಬಳಕೆಯ ಬಗ್ಗೆ ಮಾಹಿತಿ ಹಾಗು ಜಾಗೃತಿ, ವ್ಯಸನಕ್ಕೊಳಗಾದವರಿಗೆ ಸಮಾಲೋಚನೆ ಹಾಗೂ ಪುನರ್ವಸತಿ ಸೇವೆ ಒದಗಿಸುವುದು ಮತ್ತು ಕ್ರೀಡೆ, ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಮೂಲಕ ಆರೋಗ್ಯಕರ ಜೀವನಶೈಲಿಯತ್ತ ಯುವಕರನ್ನು ಪ್ರೋತ್ಸಾಹಿಸುವುದು ಆಪರೇಷನ್ ರೈಸ್‌ನ ಉದ್ದೇಶವಾಗಿದೆ.

ಅದೇ ರೀತಿ ವಿದ್ಯಾರ್ಥಿಗಳು ಮತ್ತು ಯುವಕರಲ್ಲಿ ಮಾದಕ ವಸ್ತುಗಳ ದುಷ್ಪರಿಣಾಮಗಳ ಕುರಿತು ಜಾಗೃತಿ ಮೂಡಿಸುವ ಉದ್ದೇಶದಿಂದ ಬೇಡ ಬ್ರೋ ಎಂಬ ಕಾರ್ಯಕ್ರಮವನ್ನು ಪೊಲೀಸ ಇಲಾಖೆ ಆಯೋಜಿಸಿದೆ.

# ಇತಿಹಾಸದಲ್ಲಿ ಈ ದಿನ

## ಜುಲೈ-17

1945: ಜರ್ಮನಿಯ ಪೋಟ್ಸ್ ಡ್ಯಾಮ್ ನಗರದಲ್ಲಿ ದ್ವಿತೀಯ ಮಹಾಯುದ್ಧದ ನಂತರದ ವ್ಯವಸ್ಥೆಗಳ ಕುರಿತು ಚರ್ಚಿಸಲು ಪೋಟ್ಸ್ ಡ್ಯಾಮ್ ಸಮ್ಮೇಳನ ಆರಂಭವಾಯಿತು.

1955: ಅಮೆರಿಕದ ಕ್ಯಾಲಿಫೋರ್ನಿಯಾದ ಅನಾಹೈಮ್‌ನಲ್ಲಿ ವಿಶ್ವಪ್ರಸಿದ್ಧ ಡಿಸ್ನಿಲ್ಯಾಂಡ್ ಮನರಂಜನಾ ಉದ್ಯಾನ ಉದ್ಘಾಟನೆಯಾಯಿತು.

1998: ಅಂತಾರಾಷ್ಟ್ರೀಯ ಅಪರಾಧ ನ್ಯಾಯಾಲಯ ಸ್ಥಾಪನೆಗೆ ಸಂಬಂಧಿಸಿದ ರೋಮ್ ಶಾಸನ ಅಂಗೀಕರಿಸಲಾಯಿತು.

1996: ತಮಿಳುನಾಡಿನ ರಾಜಧಾನಿ ಮದ್ರಾಸ್ ನಗರದ ಹೆಸರನ್ನು ಅಧಿಕೃತವಾಗಿ ಚೆನ್ನೈ ಎಂದು ಬದಲಾಯಿಸಲಾಯಿತು.

### ಜನನ

1939: ಇರಾನ್‌ನ ಸರ್ವೋಚ್ಚ ನಾಯಕ ಅಲಿ ಖಮೇನಿ

1954: ಜರ್ಮನಿಯ ಮಾಜಿ ಚಾನ್ಸಲರ್ ಆಂಗೆಲಾ ಮರ್ಕೆಲ್

### ನಿಧನ

1790: ಖ್ಯಾತ ಅರ್ಥಶಾಸ್ತ್ರಜ್ಞ ಆಡಮ್ ಸ್ಮಿತ್

1967: ಜಾಜ್ ಸಂಗೀತದ ದಿಗ್ಗಜ ಜಾನ್ ಕೊಲ್ಟ್ರೇನ್

# ಮೀಟ್ ಮಿಸ್ಟರ್ ಗಜ್‌ರಾಜ್-2

**ಧನಂಜಯ ಜೀವಾಳ ಬಿ.ಕೆ.**

**ಗ್ರಾಮಾಯಣ-22**

ಆಗತಾನೆ ಮಾರುಕಟ್ಟೆಗೆ ಬರುತ್ತಲಿದ್ದ, ನಮ್ಮೆಲ್ಲರಿಗೂ ಸೋಜಿಗದ ವಸ್ತುವಾಗಿದ್ದ ಸೋಲಾರ್ ಲೈಟನ್ನು ಬೆಳಕಿಗಾಗಿ ಉರಿಸಲಾಯ್ತು. ಎಲ್ಲರಿಗೂ ವಿಪರೀತ ಹಸಿವು ತಿನ್ನಲು ಏನಾದರೂ ಸಿಕ್ಕರೆ ಸಾಕು, ಒಂದಷ್ಟು ತಿಂದು ಈ ಪ್ರಪಂಚವನ್ನೇ ಮರೆತುಹೋಗುವಂತೆ ಮರಣನಿದ್ರೆ ಮಾಡೋಣವೆಂದುಕೊಂಡವರಿಗೆ ಅಡುಗೆಗೆ ನೀರು ತರಬೇಕೆಂಬ ವಿಷಯ ಅರಿವಿಗೆ ಬಂದಿತು. ದಾರಿಯುದ್ದಕ್ಕೂ ನೀರಿನ ಝರಿಗಳು, ಹರಿಯುವ ಹಳ್ಳಗಳನ್ನು ಕಂಡು ಕೈಕಾಲು ಮುಖ ತೊಳೆದುಕೊಂಡು, ಬಾಟಲಿಗೆ ತುಂಬಿಸಿಕೊಂಡು ಬಂದಿದ್ದವರಿಗೆ ಸಂಜೆ ನಾಲ್ಕರ ನಂತರ ಯಾವುದೇ ತೊರೆ, ಹಳ್ಳಗಳು ಎದುರಾಗದಿದ್ದುದು ಅರಿವಿಗೇ ಬಂದಿರಲಿಲ್ಲ. ನಡೆಯುತ್ತಾ ನಡೆಯುತ್ತಾ ನೀರಿನ ಮೂಲವಿಲ್ಲದ ಬಂಜರು ಪ್ರದೇಶವನ್ನು ಪ್ರವೇಶಿಸಿಬಿಟ್ಟಿದ್ದೆವು. ನೀರಿನ ಬಾಟಲಿಗಳ ನೀರು ಅಷ್ಟೊತ್ತಿಗೆ ತಳಕಂಡು ಗಂಟೆಗಳೇ ಕಳೆದಿದ್ದವು. ಜೊತೆಯಲ್ಲಿದ್ದವರ ಬಾಟಲಿ ನೀರಿಗೆ ಅಂಗಲಾಚಿ ಕುಡಿದು ತಂಗುದಾಣದ ನಿರೀಕ್ಷೆಯಲ್ಲಿ ಲಗುಬಗೆಯಿಂದ ನಡೆಯುತ್ತಾ ಆತಂಕ, ಹಸಿವು, ಬಾಯಾರಿಕೆ, ಕತ್ತಲೆಯ ಅವ್ಯಕ್ತ ಭಯ, ಹಳಿಗಳ ಸಂದಿಯಲ್ಲಿನ ಹಾವುಗಳ ಭೀತಿಯಲ್ಲಿ ಆ ಪಾಳುಬಿದ್ದ ನಿಲ್ದಾಣವನ್ನು ತಲುಪಿದ್ದೆವು. ಆ ರಾತ್ರಿಯ ನೀರವತೆಯಲ್ಲಿ ಹಸಿವಿನಿಂದ ಕಂಗೆಟ್ಟಿದ್ದ ನಾವು ನೀರಿನ ಮೂಲವನ್ನು ಗುರುತಿಸುವ ಸಲುವಾಗಿ ನಿಲ್ದಾಣದ ಸುತ್ತಲೂ ನಿಶ್ಯಬ್ಧತೆಯಿಂದ ನಿರುಕಿಸಿದೆವು. ಎಲ್ಲಾದರೂ ನೀರು ಹರಿಯುವ, ಸುರಿಯುವ, ತೊಟ್ಟಿಕ್ಕುವ ಸದ್ದು ಕೇಳುವುದೇ ಎಂದು ಕಿವಿಯ ಮೂಲಕ ತನಿಖೆ ಮಾಡಲಾರಂಬಿಸಿದೆವು. ಏನೂ ಪ್ರಯೋಜನವಾಗಲಿಲ್ಲ ಕಿವಿ ಗಡಚಿಕ್ಕುವಂಥಾ ಜೀರುಂಡೆಗಳ ಸದ್ದು ಬಿಟ್ಟರೆ ಬೇರೇನೂ ಕೇಳಿಸಿಕೊಳ್ಳಲಾಗದೇ ಒಬ್ಬರೆಡೆಗೊಬ್ಬರು ಅಸಹಾಯ ದೃಷ್ಟಿ ಬೀರಿದೆವು. ಸರಿ, ಈಗ ತಂಡದ ಹದಿನೈದಿಪ್ಪತ್ತು ಮಂದಿಯ ರಾತ್ರಿಯ ಊಟಕ್ಕೆ ಏನಾದರೂ ವ್ಯವಸ್ಥೆ ಮಾಡಲೇಬೇಕಿತ್ತು. ರಾತ್ರಿಯ ಹೊತ್ತಲ್ಲಿ ಹೆಡ್ ಲೈಟಿನ ಶಿಕಾರಿಗೆ ಹೋಗಿ ಅನುಭವವಿದ್ದ ನಾನು ನನ್ನ ಬ್ಯಾಗಿನಲ್ಲಿದ್ದ ಮೊಳದುದ್ದದ ಕತ್ತಿ ಹಾಗೂ ಮೂರು ಸೆಲ್ಲಿನ ಎವರೆಡಿ ಟಾರ್ಚನ್ನು ಹಿಡಿದು ಯಾರಾದ್ರೂ ಇಬ್ಬರು ನನ್ನ ಜೊತೆ ಬನ್ನಿ ಎಂದೆ. ಹಲವರು ಆ ಕತ್ತಲಲ್ಲಿ ಹಾಗೂ ಆ ಅಪರಿಚಿತ ಜಾಗದಲ್ಲಿ ಆ ಹೊತ್ತಿನಲ್ಲಿ ನೀರು ಹುಡುಕಿ ತರುವ ಸಾಹಸಕ್ಕೆ ಉತ್ಸಾಹ ತೋರಲಿಲ್ಲ. ನನ್ನ ವೀರಪ್ಪನ್ ಲುಕ್ ನೋಡಿ ಸ್ಫೂರ್ತಿ ಪಡೆದ ತಿಪಟೂರಿನ ರಂಗಸ್ವಾಮಿ, ಬೆಂಗಳೂರಿನ ವಿನಯ್ ಹಾಗೂ ದಾವಣಗೆರೆಯ ಸತೀಶ್ ನಡೀರಿ ನೀರನ್ನು ತಂದೇ ತರೋಣ ಎಂದು ಸಿದ್ಧವಾಗೇಬಿಟ್ಟರು. ಗಂಜಿಅನ್ನ ಮಾಡುವ ಪಾತ್ರೆ, ಐದು ಲೀಟರ್ ಸಾಮರ್ಥ್ಯದ ಒಂದು ನೀರಿನ ಕ್ಯಾನು, ಒಂದು ಬ್ಯಾಗಿನಲ್ಲಿ ನಾಲ್ಕಾರು ದೊಡ್ಡಗಾತ್ರದ ನೀರಿನ ಬಾಟಲಿಗಳನ್ನು ತುಂಬಿಕೊಂಡು ಹೊರಟೆವು.

ಆಳೆತ್ತರ ಬೆಳೆದಿದ್ದ ಹುಲ್ಲು ರೈಲುಕಂಬಿಗಳನ್ನೇ ನುಂಗಿ ಅಗಾಧವಾಗಿ ಬೆಳೆದಿತ್ತು. ಎಷ್ಟು ಪ್ರಯತ್ನಿಸಿದರೂ ಟಾರ್ಚಿನಿಂದ ಮಾರುದೂರಕ್ಕೂ ಬೆಳಕು ಚೆಲ್ಲಲು ಸಾಧ್ಯವಿರಲಿಲ್ಲ. ಒಂದು ಕೈಯಲ್ಲಿ ಕತ್ತಿಯಿಂದ ಹುಲ್ಲನ್ನು ಬದಿಗೆ ಸರಿಸುತ್ತಾ ಇನ್ನೊಂದು ಕೈಯಿಂದ ಟಾರ್ಚಿನ ಬೆಳಕನ್ನು ಹರಿಸುತ್ತಾ ಗೊತ್ತುಗುರಿಯಿಲ್ಲದೇ ಪಶ್ಚಿಮಘಟ್ಟದ ಅಬೇಧ್ಯ ಕಾಡಿನ ನಡುವೆ ಆ ನಟ್ಟಿರುಳಿನಲಿ ಅಡುಗೆಗೆ ನೀರನ್ನರಸುತ್ತಾ ನಡೆದದ್ದನ್ನು ನೆನೆಸಿಕೊಂಡರೆ; ಈಗ, ಹೀಗೂ ಆಗುತ್ತದೆಯಾ? ಎಂದು ಆಶ್ಚರ್ಯವಾಗುತ್ತದೆ. ಆಳೆತ್ತರದ ಒಣ ಹುಲ್ಲಿನ ನಡುವೆ ಸರಬರ ಜರಬರ ಸದ್ದು ಮಾಡುತ್ತಾ ನಡೆಯುತಿದ್ದರೆ ನೀರಿನ ಮೂಲ ಪಕ್ಕದಲ್ಲಿದ್ದರೂ ಗ್ರಹಿಸಲು ಕಷ್ಟವೆಂದರಿತು ಕೆಲಕಾಲ ಸದ್ದಿಲ್ಲದೇ ನಿಂತು ಎಲ್ಲಾದರೂ ನೀರ ಹರಿವಿನ ಸದ್ದು ಕೇಳುವುದೇ ಎಂದು ಮೈಯೆಲ್ಲಾ ಕಿವಿಯಾದೆವು. ಅಲ್ಲೆಲ್ಲೋ ದೂರದಲ್ಲಿ ಪ್ರಪಾತದ ಬುಡದಲ್ಲಿರಬಹುದು ನೀರು ಸಳಸಳನೆ ಚಲಿಸುತ್ತಿರುವ ಮಂಜುಳ ನಿನಾದ ಕಿವಿಗೆ ಬಿದ್ದಿತು. ನಾನು ನಿಂತಿದ್ದ ಸ್ಥಳದಿಂದ ಬಲಕ್ಕೆ ಕೆಂಜಿಗೆ ಮುಳ್ಳಿನ ಜಿಗ್ಗಿನಾಚೆಗಿನ ಅಬೇಧ್ಯ ಕಗ್ಗಾಡಿನ ಆಳದಲ್ಲೆಲ್ಲೋ ನೀರು ಹರಿಯುತ್ತಿರುವ ಸದ್ದು ಆ ಜೀರುಂಡೆ ಸದ್ದಿನ ನಡುವೆಯು ತೇಲಿಬಂದು ನಮ್ಮ ಬಾಯಾರಿಕೆಯನ್ನು ಅರ್ಧದಷ್ಟು ತಣಿಸಿತು. ಸುತ್ತಿ ಬಳಸಿ ಮುಳ್ಳುಕಂಟಿಗಳಿಂದ ಮುಂಗೈ, ಮೊಣಕೈಗಳನ್ನು ಗೀರು ಗಾಯ ಮಾಡಿಸಿಕೊಂಡು, ಎರಡ್ಮೂರು ಬಾರಿ ಆ ಕತ್ತಲಲ್ಲೇ ಜಾರಿ, ಎಡವಿ, ಮುಗ್ಗರಿಸಿ ಬಿದ್ದು ನುಗ್ಗುನುಗ್ಗಾದೆವು. ಅಂತೂ ನೀರು ನಮ್ಮ ಕಣ್ಣಿಗೆ ಕಾಣಿಸುವಷ್ಟು ದೂರಕ್ಕೇ ಹೋದೆವು. ಆ ಒತ್ತಾಗಿ ಬೆಳೆದಿದ್ದ ಗಿಡಗಳ ನಡುವೆ



ನೀರು ಹರಿಯುತ್ತಿದ್ದುದು ದೂರದಿಂದಲೇ ಕಾಣಿಸುತಿತ್ತು. ಮೂರು ಸೆಲ್ಲಿನ ಟಾರ್ಚ್ ಬೆಳಕನ್ನು ನೀರಿನಮೇಲೆ ಬಿಟ್ಟಾಗ ಅದರ ಪ್ರತಿಫಲನ ಮುಗಿಲೆತ್ತರದ ಮರಗಳ ಛತ್ರಿಯ ಒಳಭಾಗದಲ್ಲಿ ಮೂಡಿ ಆ ಮರದ ಯಾವುದೋ ರೆಂಬೆಗಳಲ್ಲಿ ಕುಳಿತು ತೂಕಡಿಸುತಿದ್ದ ಬೃಹದಾಕಾರದ ಗೂಬೆಯೊಂದು ತನ್ನ ಅಗಾಧ ವಿಸ್ತಾರದ ರೆಕ್ಕೆಗಳನ್ನು ಬಿಚ್ಚಿಕೊಂಡು ನಮ್ಮತ್ತಲೇ ಹಾರಿ, ಮತ್ತಾವುದೋ ಮರದ ರೆಂಬೆಯನ್ನರಸುತ್ತಾ ಆ ಅನಂತ ಕತ್ತಲೆಯಲ್ಲಿ ಲೀನವಾಯಿತು.

ಆ ಗೂಬೆಯ ಹರವಿದ ರೆಕ್ಕೆಯ ರಪಾರಪಾ ಸದ್ದು ಮತ್ತು ಅದು ನಮ್ಮೆಡೆಗೇ ದಾವಿಸಿ ಬಂದದನ್ನು ನೋಡಿ ಗಾಬರಿಗೊಂಡ ನಾವು ನಮಗರಿವಿಲ್ಲದೆಯೇ ಸಣ್ಣ ಚೀತ್ಕಾರದೊಂದಿಗೆ ಕಂಪಿಸಿಬಿಟ್ಟೆವು. ಗುಂಪಿನ ನಾಯಕನಾಗಿದ್ದ ಹಾಗೂ ವೀರಪ್ಪನ್ ಗೆಟಪ್ ತೋರಿಸಿದ್ದ ನಾನು, ಆಗಿದ್ದ ಪೋಡಿಗೆಯನ್ನು ತೋರಿಸಿಕೊಳ್ಳದೇ ಬನ್ನಿ ಬನ್ನಿ ಇಂಥದ್ದನ್ನೆಲ್ಲ ನಾ ಎಷ್ಟು ನೋಡಿಲ್ಲ ಎಂದು ಹೇಳಿ ನೀರಿನ ಸಮೀಪಕ್ಕೆ ಹೋಗಲು ಅವಕಾಶಗಳಿವೆಯಾ ಎಂದು ಟಾರ್ಚಿನ ಬೆಳಕಿನಲ್ಲೇ ಲೆಕ್ಕ ಹಾಕತೊಡಗಿದೆ. ನಮ್ಮ ಗುಂಪಿನಲ್ಲಿದ್ದ ರಂಗಸ್ವಾಮಿಗೆ ನಾನಿಲ್ಲೇ ನಿಂತು ಟಾರ್ಚ್ ಹಾಕುತ್ತೇನೆ, ನೀನು ಹಾಗೇ ಆ ಬೆಳಕನ್ನು ಅನುಸರಿಸಿಕೊಂಡು ನೀರಿನ ಬಳಿ ಹೋಗಲು ಸಾಧ್ಯವಾ ಪ್ರಯತ್ನಿಸು ಎಂದೆ. ಓಕೆ ಓಕೆ ಎಂದ ರಂಗಸ್ವಾಮಿ ನನ್ನ ಕೈಯಿಂದ ಕತ್ತಿಯನ್ನು ತೆಗೆದುಕೊಂಡು ನಿಧಾನವಾಗಿ ಆ ಕೊರಕಲಿನ ಇಳಿಜಾರಿನಲ್ಲಿ ಗಿಡಗಂಟಿಗಳ ಬುಡ ಹಾಗೂ ಮಣ್ಣು ಸಡಿಲಾಗಿ ಬೇರು ಹೊರಬಂದಿದ್ದವನ್ನೇ ಹಿಡಿದುಕೊಂಡು ಮೈಯೆಲ್ಲಾ ಕಣ್ಣಾಗಿ ಒಂದೊಂದೇ ಹೆಜ್ಜೆಯನ್ನಿಡುತ್ತಾ ಎಚ್ಚರಿಕೆಯಿಂದ ಇಳಿಯತೊಡಗಿದ. ಅವ ಶಿಲಾರೋಹಿಯೊಬ್ಬ ಕಡಿದಾದ ಕಲ್ಲಿನ ಬಿರುಕೊಂದರೊಳಗೆ ಹಗ್ಗಗಳ ಸಹಾಯದಿಂದ ಜೇಡ ಹರಿದಾಡಿದಂತೆ ಚಲಿಸುತಿದ್ದರೆ ಮೇಲಿದ್ದ ನಾವು ಮೂವರೂ ಉಸಿರು ಬಿಗಿಹಿಡಿದು ಆ ಅಸೀಮ ಸಾಹಸವನ್ನು ನೋಡುತಿದ್ದೆವು. ಯಾಕೋ ನನಗೆ ಈ ರೀತಿ ಕಷ್ಟದಿಂದ ಕೆಳಗಿಳಿದು ನೀರಿನ ಮೂಲ ತಲುಪುವುದೇನೋ ಸರಿ, ಆದರೆ ಅಲ್ಲಿಂದ ನಮ್ಮ ಅಗತ್ಯದಷ್ಟು ನೀರನ್ನು ಮೇಲಕ್ಕೆ ತರಲು ಸಾಧ್ಯವೇ? ಎಂಬ ಗುಮಾನಿ ಮೂಡತೊಡಗಿತು. ಏನನ್ನೋ ತೀರ್ಮಾನಿಸಿದವನಂತೆ ರಂಗಸ್ವಾಮಿ, ಮೇಲೆ ಬಾ ಇದ್ಯಾಕೋ ಆಗುವ ಕೆಲಸದಂತೆ ಕಾಣ್ತಿಲ್ಲ ಎಂದು ಕೂಗಿ ಹೇಳಿ, ಟಾರ್ಚ್‌ನಲ್ಲಿಯೇ ಸನ್ನೆ ಮಾಡಿದೆ. ಆ ನೀರವ ನಿರಾತಂಕದ ಕಗ್ಗಾಡಿನ ಆ ಕಾಳರಾತ್ರಿಯಲ್ಲಿ ನನ್ನ ಕೂಗು ಯಾವ ಯಾವ ಪ್ರಾಣಿ ಪಕ್ಷಿಗಳನ್ನು ಬಡಿದೆಬ್ಬಿಸಿತೊ, ಇದ್ದಕಿದ್ದಂತೆ ಆ ಕೊರಕಲಿನ ಕಂದರದ ಸುತ್ತಮುತ್ತಲಿನ ಕಾಡು ಝುಲ್ಲನೆ ವಿಹ್ವಲಗೊಂಡಿತು. ಹತ್ತಾರು ಹಕ್ಕಿಗಳು ಭರ್ ಭರ್ ಎಂದು ತೂಕಡಿಸುತ್ತಿದ್ದಲ್ಲಿಂದ ಹಾರಿದವು. ಯಾವೋ ಒಂದಷ್ಟು ಕಾಡುಮಿಕಗಳು ತಮ್ಮ ವಿಶ್ರಾಂತಿ ಸ್ಥಳದಿಂದ ಧಿಕ್ ಎಂದು ಹೌಹಾರಿ ಪಣಾರನೆ ಹಾರಿ ಓಟಕಿತ್ತವು. ಆ ಗಾಬರಿಗೆ ಈ ರಂಗಸ್ವಾಮಿ ಸಹಾ ಸಮತೋಲನ ತಪ್ಪಿ ಓಓಓ ಅನ್ನುತ್ತಾ ಕೊರಕಲಿನೊಳಗೆ ಜಾರಿ ಕಾಣೆಯಾದ. (ಮುಂದುವರಿಯುವುದು)

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248